ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕ: 30.01.2024.

**ಮುಂದುವರೆದ ಪಾಟೀ ಸವಾಲು: ವಾದಿ ಪರ ಶ್ರೀ ಬಿ.ಎ.ಡಿ. ವಕೀಲರಿಂದ:**

ವಾದಿ ನನಗೆ ದೂರದ ಸಂಬಂಧಿ ಮಾವನಾಗಬೇಕು. ವಾದಿ ಮತ್ತು ನನ್ನ ಮನೆ ಸಮೀಪ ಇರುತ್ತವೆ, ನನ್ನ ಮನೆ ಹಿಂದಿನ ಗಲ್ಲಿಯಲ್ಲಿ ಇದ್ದು, ವಾದಿ ಮನೆ ಮುಂದಿನ ಗಲ್ಲಿಯಲ್ಲಿ ಇರುತ್ತದೆ. ಇಬ್ಬರು ಮನೆಗಳು ಕೂಡಾ ತೀರ್ಥ ತಾಂಡಾದಲ್ಲಿ ಇರುತ್ತವೆ ಎಂದರೆ ಸರಿ. ನನ್ನ ಜಮೀನಿನ ಸರ್ವೆ ನಂ.320 ಇರುತ್ತದೆ. ಹಿಸ್ಸಾ ನಂಬರಗಳನ್ನು ನನಗೆ ಹೇಳಲು ಬರುವುದಿಲ್ಲ. ನನ್ನ ಜಮೀನು 2 ಎಕರೆ 20 ಗುಂಟೆ ಇರುತ್ತದೆ. ದಾವಾ ಸ್ವತ್ತಿನ ಪೂರ್ವಕ್ಕೆ ದಾನಾಬಾಯಿ ಮಾನಸಿಂಗ್ ಜಮೀನು ಇರುತ್ತದೆ. ಪಶ್ಚಿಮಕ್ಕೆ ಬ್ರಾಹ್ಮಣರ ಜಮೀನು ಇರುತ್ತದೆ. ಉತ್ತರಕ್ಕೆ ಗಾನುಕೃಷ್ಣ ರವರ ಜಮೀನು ಇರುತ್ತದೆ. ದಕ್ಷಿಣಕ್ಕೆ ವಿಠ್ಠಲ್ ರಾವ್ ರವರ ಜಮೀನು ಇರುತ್ತದೆ.

ಈ ದಾವೆ ಮಾಡಿದ ನಂತರ ನಾನು ಗುಲಾಬ್ ಮೇಲೆ ಆಗಲಿ ಅಥವಾ ವಾದಿಯ ಮೇಲೆ ಆಗಲಿ ಯಾವುದೇ ಕ್ರಿಮಿನಲ್ ಕೇಸ್ ಹಾಕಿಲ್ಲ. ಅದೇ ಪ್ರಕಾರ ಈ ದಾವೆಯಲ್ಲಿ ಹೇಳಲಾದ ಕ್ರಯ ಕರಾರು ಪತ್ರವನ್ನು ರದ್ದು ಮಾಡಲು ನಾನು ಯಾವುದೇ ಬೇರೆ ಕೇಸ್‌ನ್ನು ಹಾಕಿಲ್ಲ ಹಾಗೂ ಈ ದಾವೆಯಲ್ಲಿ ಕೌಂಟರ್ ಕ್ಲೇಮನ್ನು ಮಾಡಿರುವುದಿಲ್ಲ. ವಾದಿ ನಮ್ಮ ತಾಂಡಾದಲ್ಲಿ ಒಬ್ಬ ಸಜ್ಜನ ವ್ಯಕ್ತಿ ಎಂದು ಗುರುತಿಸಿಕೊಂಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಸುಮಾರು 7 ವರ್ಷಗಳ ಹಿಂದೆ ನಾನು ನನ್ನ ಮೊಮ್ಮಗಳ ಮದುವೆ ಸಲುವಾಗಿ ಹಣ ಕೊಡುವುದು ಇತ್ತು, ಆ ಕಾರಣದ ಸಲುವಾಗಿ ನಾನು ದಾವಾ ಸ್ವತ್ತುನ್ನು ಮಾರಾಟ ಮಾಡಲು ತೆಗೆದಿದ್ದೆ ಎಂದರೆ ಸರಿಯಲ್ಲ.

ಸುಭಾಶ್ ಅಂದರೆ ನನ್ನ ಮೈದುನ ಇರುತ್ತಾನೆ. ನನ್ನ ಅಳಿಯನ ಹೆಸರು ಪ್ರೇಮ ತಂದೆ ಗಣಪತಿ ಚವ್ಹಾಣ ಇರುತ್ತದೆ. ಆತ ಮುಂಬೈದಲ್ಲಿ ಇರುತ್ತಾನೆ. ನಾನು ಅಳಿಯನಿಂದ ಸಾಲ ಪಡೆದುಕೊಂಡಿದ್ದೆ ಎಂದರೆ ಸರಿಯಲ್ಲ. ನನ್ನ ಅಳಿಯ ಹಣ ಬೇಡಲು ಹತ್ತಿದಾಗ ನಾನು ವಾದಿಗೆ ಹೊಲ ಮಾರಾಟ ಮಾಡಲು ತೆಗೆದಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಹಣ ಬರಬೇಕೆಂದು ನಮ್ಮ ಹಳ್ಳಿಯಲ್ಲಿ ನಾನು ಪ್ರಚಾರ ತೆಗೆದಿದ್ದೆ ಎಂದರೆ ಸರಿಯಲ್ಲ. ನನ್ನ ಮಕ್ಕಳ ಹಾಗೂ ನನ್ನ ಗಂಡನ ಸಮ್ಮತಿ ಪಡೆದುಕೊಂಡು ದಾವಾ ಸ್ವತ್ತಿನ ಮಾತುಕತೆ ನಮ್ಮ ಮನೆಯಲ್ಲಿಯೇ ಆಗಿರುತ್ತದೆ ಎಂದರೆ ಸರಿಯಲ್ಲ.

ಆ ದಿನ ರೂ.5 ಲಕ್ಷ ಗಳಿಗೆ ದಾವಾ ಸ್ವತ್ತುನ್ನು ಮಾರಾಟ ಮಾಡುವುದಾಗಿ ಮಾತುಕತೆ ಆಯಿತು ಹಾಗೂ ನಾನು ಅದೇ ರೀತಿ ರೂ.5 ಲಕ್ಷ ಹಣವನ್ನು ವಾದಿಯಿಂದ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆ ದಿನ ನನ್ನ ಗಂಡನ ಸಮಕ್ಷಮ ಹಾಗೂ ನನ್ನ ಮೈದುರ ಸಮಕ್ಷಮ ಹಾಗೂ ನನ್ನ ಮಗ ಗೋವಿಂದ ಮತ್ತು ಕಾಶಿನಾಥ ಹಾಗೂ ಸಾಕ್ಷಿದಾರರಾದ ಧನ್ನು, ಮೋತಿರಾಮ, ಜಯರಾಮ ಮತ್ತು ಗೋವಿಂದ ರವರ ಸಮಕ್ಷಮ ನಾನು ರೂ.5 ಲಕ್ಷ ಹಣವನ್ನು ಸ್ವಿಕರಿಸಿರುತ್ತೇನೆ ಎಂದರೆ ಸರಿಯಲ್ಲ. ಮೇಲೆ ಹೇಳಿದವರು ಎಲ್ಲರು ಜೀವಂತ ಇದ್ದಾರೆ, ನಾನು ಅವರ ಸಾಕ್ಷ್ಯ ಮಾಡಿಸುತ್ತೇನೆ.

ತದನಂತರ ನಾವೆಲ್ಲರು ಆಳಂದ ಪಟ್ಟಣಕ್ಕೆ ದಾಖಲೆ ತಯಾರು ಮಾಡುವ ಸಲುವಾಗಿ ಬಂದಿರುತ್ತೇವೆ ಎಂದರೆ ಸರಿಯಲ್ಲ. ಅದೇ ದಿನ ರೂ.100/- ಛಾಪಾ ಕಾಗದ ಮೇಲೆ ಮುನಿರ್ ಮುಲ್ಲಾ ರವರ ಹತ್ತಿರ ನಿಪಿ-1 ರಂತೆ ದಾಖಲೆ ತಯಾರು ಮಾಡಿರುತ್ತೇವೆ ಎಂದರೆ

ಸರಿಯಲ್ಲ. ನಾನು ಮತ್ತು ನನ್ನ ಗಂಡ ಹೇಳಿದ ಪ್ರಕಾರ ನಿಪಿ-1 ರ ದಾಖಲೆಯನ್ನು ಮುನಿರ್ ಮುಲ್ಲಾ ತಯಾರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ತದನಂತರ ಮುನಿರ್ ಮುಲ್ಲಾ ರವರು ಸದರಿ ದಾಖಲೆಯನ್ನು ಆಂಗ್ಲ ಭಾಷೆಯಲ್ಲಿ ತಯಾರು ಮಾಡಿ ಅದನ್ನು ನಮಗೆ ಓದಿ ಹೇಳಿದ್ದು, ನಂತರ ನಾನು ನಿಪಿ-1 ರ ಪ್ರತಿ ಪುಟಕ್ಕೆ ನನ್ನ ಹೆಬ್ಬಟ್ಟಿನ ಸಹಿ ಮಾಡಿದ್ದು, ವಾದಿ ತಮ್ಮ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ನಾನು ನಿಪಿ-1 ರಲ್ಲಿ ಹೇಳಿದ ಎಲ್ಲ ಸಾಕ್ಷಿದಾರರ ಸಮಕ್ಷಮ ನಿಪಿ-1 ಕ್ಕೆ ಹೆಬ್ಬಟ್ಟಿನ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಂತರ ನಾನು ನನ್ನ ಫೋಟೋ ಮತ್ತು ವಾದಿ ತನ್ನ ಫೋಟೋ ಕೊಟ್ಟು ನಿಪಿ-1 ರ ದಾಖಲೆಗೆ ದಾಖಲಿಸಬೇಕೆಂದು ನೀಡಿರುತ್ತೇವೆ ಎಂದರೆ ಸರಿಯಲ್ಲ. ನನಗೆ ಮಾತುಕತೆ ಪ್ರಕಾರ ರೂ.5 ಲಕ್ಷ ಹಣ ಸಂಪೂರ್ಣ ಮುಟ್ಟಿದ್ದರಿಂದ ನಾನು ಮೂಲ ದಾಖಲೆ ನಿಪಿ-1 ನ್ನು ವಾದಿ ಹತ್ತಿರ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಂತರ ನಾನು ಸರ್ವೆ ಮಾಡಿದ ಮೇಲೆ ದಾವಾ ಸ್ವತ್ತನ್ನು ಖರೀದಿ ಹಾಕಿಕೊಡುತ್ತೇನೆ ಎಂದು ನಿಪಿ-1 ರಲ್ಲಿ ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1 ರ ದಾಖಲೆ ನಿಜವಿರುತ್ತದೆ ಎಂದರೆ ಸರಿಯಲ್ಲ.

ಆ ದಿನ ನಾನು ನಿಪಿ-1 ರ ದಾಖಲೆಯನ್ನು ವಾದಿಗೆ ಕೊಟ್ಟು ನನ್ನ ತಾಂಡಾಗೆ ನಾನು ಹೊರಟು ಹೋಗಿರುತ್ತೇನೆ ಎಂದರೆ ಸರಿಯಲ್ಲ. ತದನಂತರ ದಿಃ 01.02.2017 ರಂದು ನಾವು ಆಳಂದ ನೋಟರಿ ರವರಾದ ಡಿ.ಬಿ. ಕುಲಕರ್ಣಿ ರವರ ಹತ್ತಿರ ನಿಪಿ-1 ರ ದಾಖಲೆಯನ್ನು ನೋಟರಿ ಮಾಡಿಸಿರುತ್ತೇವೆ ಎಂದರೆ ಸರಿಯಲ್ಲ. ತದನಂತರ ನಾನು ನಿಪಿ-1 ರಂತೆ ಕರಾರನ್ನು

ಪಾಲಿಸಿಲ್ಲ ಹಾಗೂ ಸರ್ವೆ ಮಾಡಿಸಿಲ್ಲ ಎಂದರೆ ಸರಿಯಲ್ಲ. ತದನಂತರ ವಾದಿ ಸಾಕಷ್ಟು ಬಾರಿ ನನ್ನನ್ನು ಸರ್ವೆ ಮಾಡಿಸಲು ಹಾಗೂ ನಿಪಿ-1 ರಂತೆ ಕರಾರು ಅನುಷ್ಠಾನ ಮಾಡಲು ಕೇಳಿಕೊಂಡರೂ ಕೂಡಾ ನಾನು ಆತನ ವಿನಂತಿಯನ್ನು ತಿರಸ್ಕರಿಸಿರುತ್ತೇನೆ ಎಂದರೆ ಸರಿಯಲ್ಲ.

ತದನಂತರ ವಾದಿ ನಿಪಿ-7 ರಂತೆ ನೋಟೀಸ್ ಕೊಟ್ಟಿರುತ್ತಾನೆ ಹಾಗೂ ಅದು ನನಗೆ ತಲುಪಿರುತ್ತದೆ ಎಂದರೆ ಸರಿಯಲ್ಲ. ಸದರಿ ನೋಟೀಸ್ ತಲುಪಿದರೂ ಕೂಡಾ ನಾನು ನೋಂದಣಿ ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಹಾಜರಾದ ನಂತರ ನಿಪಿ-7 ರ ನೋಟಿಸ್ ಬಗ್ಗೆ ಅಂಚೆ ಕಛೇರಿಗೆ ಹೋಗಿ ನಿಪಿ-7 ರ ನೋಟೀಸ್ ತಲುಪದೇ ಇರುವ ಬಗ್ಗೆ ನಾನು ಚೌಕಾಶಿ ಮಾಡಿರುವುದಿಲ್ಲ. ನ್ಯಾಯಾಲಯದಿಂದ ಸಮನ್ಸ್ ಕೊಡುವ ಸಮಯದಲ್ಲಿ ಅಂಚೆ ಇಲಾಖೆಯ ಸ್ವಿಕೃತಿ ಮೇಲೆ ನನ್ನ ಹೆಬ್ಬೆಟ್ಟಿನ ಸಹಿ ಪಡೆದಿದ್ದು, ಸಾಕ್ಷಿಗೆ ಸದರಿ ಹೆಬ್ಬೆಟ್ಟಿನ ಸಹಿ ತೋರಿಸಲಾಗಿ, ಸಾಕ್ಷಿ ಅದು ನನ್ನದು ಅಲ್ಲ ಎಂದು ನುಡಿಯುತ್ತಾರೆ.

ನಾನು ವಾದಿಯ ಜೊತೆ ಮಾಡಿದ ವ್ಯವಹಾರವನ್ನು ಅನುಷ್ಠಾನಗೊಳಿಸದೇ ಇರುವ ಕಾರಣ ವಾದಿ ನನ್ನ ವಿರುದ್ಧ ಈ ದಾವೆ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಗುಲಾಬ್ ಜೊತೆ ಸೇರಿ ವಾದಿ ಈ ದಾವೆ ಮಾಡಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ನಷ್ಟ ಮಾಡುವ ಉದ್ದೇಶದಿಂದ, ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**